## ಪ್ರಾರ್ಥನೆ

### ಉಪನಿಷತ್ತುಗಳಿಂದ

ಹಿರಣ್ಮಯೇನ ಪಾತ್ರೇಣ ಸತ್ಯಸ್ಯಾಪಿಹಿತಂ ಮುಖಮ್ ।
ತತ್ತ್ವಂ ಪೂಷನ್ನಪಾವೃಣು ಸತ್ಯಧರ್ಮಾಯ ದೃಷ್ಟಯೇ ॥

ಹೇ ಪೂಷನ್ (ಪೋಷಕನಾದ ಸೂರ್ಯನೇ), ಜ್ಯೋತಿರ್ಮಯವಾದ ಆದಿತ್ಯಮಂಡಲವೆಂಬ ಮುಚ್ಚಳದಿಂದ ಸತ್ಯದ ದ್ವಾರವು ಮುಚ್ಚಲ್ಪಟ್ಟಿದೆ. ನೀನು ಸತ್ಯಧರ್ಮನು (ಸತ್ಯಬ್ರಹ್ಮನ ಉಪಾಸಕ ಅಥವಾ ಸತ್ಯಧರ್ಮವನ್ನು ಅನುಷ್ಠಾನವನ್ನು ಮಾಡುವವನು). ನನಗೆ ಸತ್ಯವು ಗೋಚರಿಸುವ ಹಾಗೆ, ಅದನ್ನು ನೀನು ತೆಗೆದುಹಾಕು.

(ಈಶಾವಾಸ್ಯ ಉಪನಿಷತ್ತು, ೧೫)

ಯೋ ದೇವೋ ಅಗ್ನೌ ಯೋ ಅಪ್ಸು
ಯೋ ವಿಶ್ವಂ ಭುವನಮಾವಿವೇಶ ।
ಯ ಓಷಧೀಷು ಯೋ ವನಸ್ಪತಿಷು
ತಸ್ಮೈ ದೇವಾಯ ನಮೋ ನಮಃ ॥

ಯಾವ ದೇವನು ಅಗ್ನಿಯಲ್ಲಿಯೂ, ನೀರಿನಲ್ಲಿಯೂ, ಔಷಧಿಗಳಲ್ಲಿಯೂ ವನಸ್ಪತಿಗಳಲ್ಲಿಯೂ ಇರುವನೋ, ಯಾವನು ವಿಶ್ವಮಂಡಲವನ್ನೆಲ್ಲ ವ್ಯಾಪಿಸಿಕೊಂಡಿರುವನೋ. ಅಂತಹ ದೇವನಿಗೆ ಪುನಃ ಪುನಃ ನಮಸ್ಕಾರ. (ಶ್ವೇತಾಶ್ವತರ ಉಪನಿಷತ್ತು, ೨. ೧೭)

ಯೋ ದೇವಾನಾಂ ಪ್ರಭವಶ್ಚೋದ್ಭವಶ್ಚ
ವಿಶ್ವಾಧಿಪೋ ರುದ್ರೋ ಮಹರ್ಷಿಃ ।
ಹಿರಣ್ಯಗರ್ಭಂ ಜನಯಾಮಾಸ ಪೂರ್ವಂ
ಸ ನೋ ಬುದ್ಧ್ಯಾ ಶುಭಯಾ ಸಂಯುನಕ್ತು ॥

ದೇವತೆಗಳ ಉತ್ಪತ್ತಿ ಮತ್ತು ವಿಭೂತಿಗಳಿಗೆ ಕಾರಣನೂ, ವಿಶ್ವ ಪಾಲಕನೂ, ಸರ್ವಜ್ಞನೂ, ಸೃಷ್ಟಿಗೆ ಮೊದಲು ಹಿರಣ್ಯಗರ್ಭನಿಗೆ (ಹಿತವೂ ರಮಣೀಯವೂ ಅತ್ಯುಜ್ವಲವೂ ಆದ ಜ್ಞಾನವು ಯಾರ ಅಂತಸ್ಸಾರವೋ ಅಂತಹವನು) ಜನ್ಮವನ್ನು ಕೊಟ್ಟವನೂ ಆದ ರುದ್ರ ದೇವನು ನಮಗೆ ಒಳ್ಳೆಯ ಬುದ್ಧಿಯನ್ನು ಕರುಣಿಸಲಿ.

(ಶ್ವೇತಾಶ್ವತರ ಉಪನಿಷತ್ತು, ೩. ೪)

ಯ ಏಕೋಽವರ್ಣೋ ಬಹುಧಾ ಶಕ್ತಿಯೋಗಾ–
ದ್ವರ್ಣಾನನೇಕಾನ್ ನಿಹಿತಾರ್ಥೋ ದಧಾತಿ ।
ವಿಚೈತಿ ಚಾಂತೇ ವಿಶ್ವಮಾದೌ ಸ ದೇವಃ
ಸ ನೋ ಬುದ್ಧ್ಯಾ ಶುಭಯಾ ಸಂಯುನಕ್ತು ॥

ಯಾವನು ಅದ್ವಿತೀಯನೂ ನಿರ್ವಿಶೇಷನೂ ಆಗಿದ್ದರೂ ಕೂಡ, ತನ್ನ ಶಕ್ತಿಯ ಮಹಿಮೆಯಿಂದ, ಸೃಷ್ಟಿಕಾಲದಲ್ಲಿ ಅನೇಕ ವಸ್ತುಸಮೂಹಗಳನ್ನು ನಾನಾಪ್ರಕಾರವಾಗಿ ಸೃಷ್ಟಿಸುವನೋ, ಯಾವನಲ್ಲಿ ವಿಶ್ವವು ಪ್ರಳಯಕಾಲದಲ್ಲಿ ಲಯಹೊಂದುವುದೋ, ಹಾಗೆಯೇ ಯಾವನಲ್ಲಿ ಸ್ಥಿತಿಕಾಲದಲ್ಲಿ ನೆಲೆನಿಂತಿರುವುದೋ, ಅಂತಹ ದೇವನು ನನಗೆ ಒಳ್ಳೆಯ ಬುದ್ಧಿಯನ್ನು ಕೊಡಲಿ. (ಶ್ವೇತಾಶ್ವತರ ಉಪನಿಷತ್ತು, ೪.೧)

## ಸೂಕ್ತಿಪ್ರಭ

### ವಿವೇಕ

ವಿವೇಕದ ಮೂಲಕ ಆಧ್ಯಾತ್ಮಿಕ ಜೀವನದ ಸಂತೋಷ, ಸಮೃದ್ಧಿಯ ಬಗ್ಗೆ ಹಾಗೂ ಪ್ರಾಪಂಚಿಕ ಆಸಕ್ತಿಗಳ ನಿಸ್ಸಾರತೆಯ ಬಗ್ಗೆ ನಿಮ್ಮ ಮನಸ್ಸಿಗೆ ಅರಿವು ಮಾಡಿಕೊಟ್ಟರೆ, ಅದು ಹೆಚ್ಚು ಹೆಚ್ಚು ಭಗವಂತನಲ್ಲಿ ಭಕ್ತಿಯನ್ನು ಹೊಂದುವುದು. ಆಗ ನೀವು ಎಲ್ಲ ಪ್ರಕ್ಷುಬ್ಧ ಚಿಂತನೆಗಳಿಂದ ಪಾರಾಗುವಿರಿ. *–ಸ್ವಾಮಿ ಬ್ರಹ್ಮಾನಂದ*

ಹೆಚ್ಚು ಹೆಚ್ಚು ವಿವೇಕಪ್ರಜ್ಞೆಯನ್ನು ಮತ್ತು ವೈರಾಗ್ಯವನ್ನು ಬೆಳೆಸಿಕೊಂಡರೆ, ನಿಮ್ಮಲ್ಲಿ ಹೆಚ್ಚು ಹೆಚ್ಚು ಶಕ್ತಿ ಪ್ರಕಟವಾಗುವುದು. ಅದರ ಅರಿವು ನಿಮಗಿರದಿದ್ದರೂ, ಮಿಕ್ಕವರಿಗೆ ಭಾಸವಾಗುವುದು. *–ಸ್ವಾಮಿ ಶಿವಾನಂದ*

ವ್ರತಾಚರಣೆ ಮತ್ತು ವಿಶೇಷ ದಿನಗಳಲ್ಲಿ ಉಪವಾಸ ಮಾಡುವುದು – ಇವುಗಳು ವೈರಾಗ್ಯ ಮತ್ತು ವಿವೇಕಗಳನ್ನು ಬೆಳೆಸಿಕೊಳ್ಳಲು ಸಹಾಯ ಮಾಡುತ್ತವೆ. ಅವುಗಳು ನಮ್ಮ ಚಿತ್ತಶುದ್ಧಿಗೆ ಸಾಧನಗಳಾಗಿ, ಆ ಮೂಲಕ ಭಗವದ್ದರ್ಶನ ಮತ್ತು ಭಗವತ್ಸಾಕ್ಷಾತ್ಕಾರಗಳಿಗೆ ನಮ್ಮನ್ನು ಸನ್ನದ್ಧರಾಗುವಂತೆ ಮಾಡುತ್ತವೆ. *–ಸ್ವಾಮಿ ಪ್ರೇಮಾನಂದ*

ಆಹಾರ, ನಿದ್ರೆ, ಭಯ ಮತ್ತು ಮೈಥುನ– ಇವುಗಳು ಮನುಷ್ಯನಿಗೂ ಪ್ರಾಣಿಗಳಿಗೂ ಸಮಾನ ಅಂಶಗಳು. ಮಾನವನಲ್ಲಿರುವ ವಿಶಿಷ್ಟ ಗುಣವೆಂದರೆ, ಜ್ಞಾನ ಮತ್ತು ನಿತ್ಯಾನಿತ್ಯ ವಸ್ತುವಿವೇಕ. ಕೆಳಮಟ್ಟದ ಮಾನವನಲ್ಲಿ, ವಿಷಯ ವಸ್ತುಗಳ ಕಡೆಗಿನ ಆಕರ್ಷಣೆ ಅಧಿಕ. ಅವನು ಉನ್ನತ ಹಂತಗಳ ಕಡೆಗೆ ಏರಿದ ಹಾಗೆಲ್ಲ, ಜ್ಞಾನದಲ್ಲಿ ತನ್ನ ಆನಂದವನ್ನು ಕಂಡುಕೊಳ್ಳುತ್ತಾನೆ. ಇದು ಸೂಕ್ಷ್ಮ ಆನಂದವಾಗಿದ್ದು, ಸಾಮಾನ್ಯ ಜೀವಿಗಳು ಅದನ್ನು ಅರ್ಥೈಸಿಕೊಳ್ಳಲಾರರು. *–ಸ್ವಾಮಿ ತುರೀಯಾನಂದ*

ಯಾವಾಗ ನಿನ್ನ ಮನಸ್ಸು ವಿಷಯಭೋಗದತ್ತ ಧಾವಿಸುವುದೋ ಆಗ ನೀನು ವಿವೇಕವನ್ನು ಉಪಯೋಗಿಸಬೇಕು. ನೋಡು, ವಿಷಯ ವಸ್ತುಗಳು ಅನಿತ್ಯವಾದುವುಗಳು. ಅವು ಬಂದುಹೋಗುತ್ತವೆ. ನಿನ್ನ ದೈನಂದಿನ ಉಳಿವಿಗಾಗಿ ಎಷ್ಟು ಬೇಕೋ ಅಷ್ಟರಲ್ಲಿ ಮಾತ್ರ ಸಂತುಷ್ಟನಾಗು. ಹೆಚ್ಚಿಗೆ ಆಶಿಸಬೇಡ. ಪ್ರಾಪಂಚಿಕ ವಸ್ತುಗಳ ಮೇಲಿನ ಅತಿಯಾದ ವ್ಯಾಮೋಹ ಪರತತ್ತ್ವ ಚಿಂತೆಯನ್ನು ಆಕ್ರಮಿಸಿಬಿಡುತ್ತದೆ. ಸತ್ಯವೊಂದೇ, ಅದೇ ಬ್ರಹ್ಮ ಬ್ರಹ್ಮನೊಬ್ಬನೇ ಸತ್ಯ, ಉಳಿದುದೆಲ್ಲ ಮಿಥ್ಯೆ. ಈ ಬಗೆಯ ಚಿಂತನೆಗಳನ್ನು ಮತ್ತೆ ಮತ್ತೆ ನಿನ್ನ ಮನಸ್ಸಿನ ಮೇಲೆ ಮೂಡಿಸಿಕೋ. ಆಗ ನಿಧಾನವಾಗಿ ವಿವೇಕಬುದ್ಧಿಯು ಉಗಮವಾಗುತ್ತದೆ. *–ಸ್ವಾಮಿ ಅದ್ಭುತಾನಂದ*

ಮಾನವನ ಮನಸ್ಸಿನಲ್ಲಿರುವ ಉಜ್ವಲ ಗುಣಗಳಲ್ಲಿ, ವಿವೇಕದಷ್ಟು ಪ್ರಯೋಜನಕಾರಿಯಾದುದು ಯಾವುದೂ ಇಲ್ಲ. ಉಳಿದ ಗುಣಗಳಿಗೆ, ಮೌಲ್ಯವನ್ನು ಕೊಡುವುದು ಮತ್ತು ಅವುಗಳು ನಿಯಮಿತ ಸ್ಥಾನಗಳಲ್ಲಿ ಸರಿಯಾಗಿ ಕಾರ್ಯವೆಸಗುವಂತೆ ಮಾಡುವುದು, ಆ ಮೂಲಕ ವ್ಯಕ್ತಿಗೆ ಶ್ರೇಯಸ್ಸನ್ನುಂಟುಮಾಡುವುದು ಅದೇ.... *–ಎಡಿಸನ್*